ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15 / 2996

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ:16.12.2015

## ಸುತ್ತೋಲೆ

ವಿಷಯ: ತಾಂತ್ರಿಕ ಸಂಸ್ಥೆಗಳಿಗೆ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆಯಲು ತಯಾರಿ ಕುರಿತು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/2014-15 ದಿ: 16.11.2015

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಪ್ಲೋಮಾ ಪ್ರೋಗ್ರಾಂಗಳಿಗೆ ಎನ್.ಬಿ.ಎ ವತಿಯಿಂದ ಮಾನ್ಯತೆ ಪಡೆಯಲು ಸಹಾಯವಾಗುವಂತೆ ಉಲ್ಲೇಖದನುಸಾರ ಈಗಾಗಲೇ ಸಚಿತ್ರ ವಿವರಣೆಯುಳ್ಳ ಸ್ವಯಂ ಮೌಲ್ಯಮಾಪನ ವರದಿ (Self Assessment Report) ಯನ್ನು ಇಲಾಖೆಯ ಅಂತರಜಾಲತಾಣದಲ್ಲಿ ಪ್ರಕಟಿಸಿ ಎಲ್ಲಾ ಅಂಶಗಳನ್ನು ಅಭ್ಯಾಸಿಸಿ ತಯಾರಿಮಾಡಿಕೊಂಡಿರಲು ಸೂಚಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ನಿರ್ದೇಶನಾಲಯದ ಎನ್ ಬಿ ಎ ಕೋಶದ ಅಧಿಕಾರಿಗಳು ಮುಂಬರುವ ಮೌಲ್ಯಮಾಪನ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಮೌಲ್ಯಮಾಪನ ಕೇಂದ್ರಗಳಲ್ಲಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ. ಈ ಸಂಬಂಧ ಮಾನ್ಯತೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು ಈ ಕಾರ್ಯಗಾರಗಳಲ್ಲಿ ಭಾಗವಹಿಸಲು ಈ ಮೂಲಕ ಸೂಚಿಸಲಾಗಿದೆ.

ಮುಂದಿನ ದಿನಗಳಲ್ಲಿ ಕಾರ್ಯಗಾರಗಳ ವಿವದರವಾದ ವೇಳಾಪಟ್ಟಿಯನ್ನು ತಿಳಿಸಲಾಗುವುದು.

ನಿರ್ದೇಶಕರು

ಇವರಿಗೆ.

1 ಎಲ್ಲಾ ಸರ್ಕಾರಿ/ಅನುದನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳ ಮುಂದಿನ ಸೂಕ್ತ ಕ್ರಮಕ್ಕಾಗಿ
2 ಇ-ಆಡಳಿತ ವಿಭಾಗದ ಸಂಯೋಜಕರು ಸೂಕ್ತ ಕ್ರಮಕ್ಕಾಗಿ
3 ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.